MAYA CARE FOUNDATION

ವರದಿ ಪತ್ರಿಕೆ

Year: 3rd Issue: 1st
2026

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

ಕಾಳಜಿ, ಕರುಣೆ ಮತ್ತು ಸಮಾನ ಅವಕಾಶಗಳ ಸಬಲೀಕರಣ

ಸಂಪಾದಕೀಯ

ವೃದ್ಧಾಪ್ಯವು ಸಹಜ ಜೀವನದ ಹಂತವಾದರೂ, ಏಕಾಂತ, ಆರೋಗ್ಯ ಸಮಸ್ಯೆಗಳು ಮತ್ತು ನೆನಪಿನ ಶಕ್ತಿ ಕುಂದುವುದು ಮುಂತಾದ ಸವಾಲುಗಳನ್ನು ಹಿರಿಯರು ಎದುರಿಸುತ್ತಾರೆ. ಡಿಮೆನ್ಷಿಯಾ ಸಾಮಾನ್ಯ ವೃದ್ಧಾಪ್ಯದ ಭಾಗವಲ್ಲ. ಸರಳ ಆಟಗಳು, ಹಾಡು, ಓದು, ಹಳೆಯ ನೆನಪುಗಳನ್ನು ಹಂಚಿಕೊಳ್ಳುವುದು ಮತ್ತು ಕುಟುಂಬದವರೊಂದಿಗೆ ಸಂವಾದ ಇವು ಹಿರಿಯರ ಮನಸ್ಸನ್ನು ಚುರುಕಾಗಿಡಲು ಸಹಾಯ ಮಾಡಬಹುದು.

ಕರ್ನಾಟಕ ಸರ್ಕಾರವು ಹಿರಿಯರು ಮತ್ತು ವಿಕಲಚೇತನರಿಗಾಗಿ ವಿವಿಧ ಪಿಂಚಣಿ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಒದಗಿಸುತ್ತಿದೆ.

ಮಾಯಾ ಕೇರ್ ಕಳೆದ ತ್ರೈಮಾಸಿಕದಲ್ಲಿಯೂ ಹಿರಿಯರಿಗೆ companionship, ಆಸ್ಪತ್ರೆ ಭೇಟಿ, ಔಷಧಿ ಮತ್ತು ದಿನನಿತ್ಯದ ಅಗತ್ಯಗಳಲ್ಲಿ ಉಚಿತ ಸಹಾಯವನ್ನು ಮುಂದುವರಿಸಿದೆ. Project Bindu ಮೂಲಕ ವಿಕಲಚೇತನರಿಗೆ ತರಬೇತಿ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುತ್ತಿದೆ.

ದೀಪಾವಳಿ ಮತ್ತು ಪಿತೃಪಕ್ಷ

ಮಾಯಾ ಕೇರ್ ವತಿಯಿಂದ ಎಲ್ಲರಿಗೂ ಸಂತೋಷ, ಶಾಂತಿ ಮತ್ತು ಸುರಕ್ಷಿತ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಹಿರಿಯರ ಸುರಕ್ಷತೆಗಾಗಿ ಅತಿಯಾದ ಶಬ್ದ ಮತ್ತು ಪಟಾಕಿಗಳನ್ನು ತಪ್ಪಿಸಿ ಜವಾಬ್ದಾರಿಯಿಂದ ಹಬ್ಬ ಆಚರಿಸೋಣ.

ಪಿತೃಪಕ್ಷದ ಸಂದರ್ಭದಲ್ಲಿ ನಮ್ಮನ್ನು ಅಗಲಿದ ಹಿರಿಯ ಫಲಾನುಭವಿಗಳನ್ನು ಗೌರವದಿಂದ ಸ್ಮರಿಸುತ್ತೇವೆ. ಅವರ ನೆನಪುಗಳು ಹಿರಿಯರ ಆರೈಕೆಯ ಮಹತ್ವವನ್ನು ಸದಾ ನೆನಪಿಸುತ್ತವೆ.

ಹಿರಿಯರೊಂದಿಗೆ ಸಮಯ ಕಳೆಯಲು ಸ್ವಯಂಸೇವಕರಾಗಿ ಕೈಜೋಡಿಸಿ; ಮಾಯಾ ಕೇರ್ಯ ಸೇವೆಯನ್ನು ಮುಂದುವರಿಸಲು ದಾನಿಗಳು ಮತ್ತು ಹಿತೈಷಿಗಳ ಸಹಕಾರವನ್ನು ಸ್ವಾಗತಿಸುತ್ತೇವೆ.

ಒಟ್ಟಾಗಿ, ವೃದ್ಧಾಪ್ಯವನ್ನು ಗೌರವಯುತ, ಸಂಪರ್ಕಪೂರ್ಣ ಮತ್ತು ಕಾಳಜಿಯುತವಾಗಿಸೋಣ

.

ಫಲಾನುಭವಿಗಳಿಂದ ಪ್ರತಿಕ್ರಿಯೆ

ರಾಜೇಶ್ವರಿ ಫೌಂಡೇಶನ್ , ಹೈದರಾಬಾದ್ **+91 7306148423**



ಮಾಯಾ ಕೇರ್ ವತಿಯಿಂದ ಆಯೋಜಿಸಿದ ರಕ್ಷಾಬಂಧನ ಕಾರ್ಯಕ್ರಮವು ನಮ್ಮ ನಿವಾಸಿಗಳಿಗೆ ತುಂಬಾ ಸಂತೋಷ ನೀಡಿತು. ಸ್ವಯಂಸೇವಕನರೇಂದ್ರ ಮತ್ತು ಅನುರಾಧಾ ಅವರ ಆತ್ಮೀಯತೆ ಮತ್ತು ಕಾಳಜಿಗೆ ಧನ್ಯವಾದಗಳು. ಈ ಕಾರ್ಯಕ್ರಮವು ನಮ್ಮ ನಿವಾಸಿಗಳಿಗೆ ಸಂತೋಷದ ಹಾಗೂ ಸ್ಮರಣೀಯ ಕ್ಷಣವಾಯಿತು.

ಸರೋಜಮ್ಮ , **82,** ಬೆಂಗಳೂರು , **9108082103**



ಮಾಯಾ ಕೇರ್ ಮತ್ತು ಸ್ವಯಂಸೇವಕ ಸೆಲ್ವರಾಜ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಬ್ಯಾಂಕಿಂಗ್ ಸಂಬಂಧಿತ ಕೆಲಸಗಳು ಹಾಗೂ ಆಸ್ಪತ್ರೆಗೆ ಭೇಟಿ ನೀಡುವ ಸಂದರ್ಭದಲ್ಲಿ ಅವರು ನನಗೆ ತುಂಬಾ ಸಹಾಯ ಮಾಡಿದರು. ಅವರ ಸಮಯ, ಕಾಳಜಿ ಮತ್ತು ಸಹಕಾರದಿಂದ ನನಗೆ ಸಾಕಷ್ಟು ಅನುಕೂಲವಾಯಿತು. ಮಾಯಾ ಕೇರ್ಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

-/-*-*-*-*-*-*-*-*-*-*-*/-*-*-*-*-*-*-*-*

ಸೈಬರ್ ವಂಚನೆ ಬಗ್ಗೆ ಜಾಗೃತಿ – ಹಿರಿಯರು ಎಚ್ಚರವಾಗಿರಿ

ಇಂದಿನ ಡಿಜಿಟಲ್ ಯುಗದಲ್ಲಿ ಆನ್‌ಲೈನ್ ವಂಚನೆ, OTP/ಬ್ಯಾಂಕ್ ವಿವರಗಳ ಕಳವು, ನಕಲಿ ಕರೆಗಳು, ಸಂದೇಶಗಳು, ಲಿಂಕ್‌ಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ ವಂಚನೆಗಳು ಹೆಚ್ಚಾಗುತ್ತಿವೆ. ವಿಶೇಷವಾಗಿ ಹಿರಿಯರು ಇಂತಹ ವಂಚನೆಗಳಿಗೆ ಒಳಗಾಗದಂತೆ ಹೆಚ್ಚಿನ ಜಾಗ್ರತೆ ವಹಿಸುವುದು ಅಗತ್ಯ.

ಸುರಕ್ಷಿತವಾಗಿರಲು:

- ಸೈಬರ್ ಅಪರಾಧ ಸಹಾಯವಾಣಿ: 1930 (24×7)OTP, PIN, ಪಾಸ್‌ವರ್ಡ್ ಅಥವಾ ಬ್ಯಾಂಕ್ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.
- ಅಪರಿಚಿತ ವ್ಯಕ್ತಿಗಳಿಂದ ಬರುವ ಕರೆ, ಸಂದೇಶ ಅಥವಾ ಲಿಂಕ್‌ಗಳನ್ನು ಪರಿಶೀಲಿಸದೆ ಕ್ಲಿಕ್ ಮಾಡಬೇಡಿ.
- ಬ್ಯಾಂಕ್ ಅಥವಾ ಸರ್ಕಾರಿ ಸಂಸ್ಥೆಯ ಹೆಸರಿನಲ್ಲಿ ಕರೆ ಬಂದರೂ, ವೈಯಕ್ತಿಕ ಮಾಹಿತಿಯನ್ನು ನೀಡುವ ಮೊದಲು ಖಚಿತಪಡಿಸಿಕೊಳ್ಳಿ.
- ಅನುಮಾನಾಸ್ಪದ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬೇಡಿ ಮತ್ತು ಅಪರಿಚಿತ ವ್ಯಕ್ತಿಗಳಿಗೆ ಮೊಬೈಲ್‌ನ ರಿಮೋಟ್ ಆಕ್ಸೆಸ್ ನೀಡಬೇಡಿ. ಯಾವುದೇ ಅನುಮಾನಾಸ್ಪದ ವಹಿವಾಟು ಕಂಡುಬಂದರೆ ತಕ್ಷಣ ನಿಮ್ಮ ಬ್ಯಾಂಕ್‌ಗೆ ಮಾಹಿತಿ ನೀಡಿ.
- ಆನ್‌ಲೈನ್‌ನಲ್ಲಿ ದೂರು ಸಲ್ಲಿಸಲು ಭಾರತ ಸರ್ಕಾರದ ಅಧಿಕೃತ National Cyber Crime Reporting Portal ಬಳಸಬಹುದು.

ದೂರು ಸಲ್ಲಿಸುವ ವೆಬ್‌ಸೈಟ್: **www.cybercrime.gov.in**

ಮಾಯಾ ಕೇರ್‌ನ ಚಟುವಟಿಕೆಗಳು

1. ಸ್ವಾತಂತ್ರ್ಯ ದಿನಾಚರಣೆ – ಆಗಸ್ಟ್ **15**

ಮಾಯಾ ಕೇರ್ ವತಿಯಿಂದ ಸ್ವಾತಂತ್ರ್ಯ ದಿನವನ್ನು ಧ್ವಜಾರೋಹಣ, ದೇಶಭಕ್ತಿ ಗೀತೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹಿರಿಯರು ಹಾಗೂ ಸ್ವಯಂಸೇವಕರ ಸಮ್ಮುಖದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

2. Goodera ಪ್ರಶಸ್ತಿ

ದೀರ್ಘಕಾಲದ ಸಹಭಾಗಿತ್ವ ಮತ್ತು ಅರ್ಥಪೂರ್ಣ ಸೇವೆಯನ್ನು ಗುರುತಿಸಿ ಮಾಯಾ ಕೇರ್ಗೆ **Goodera** ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ನಮ್ಮ ತಂಡಕ್ಕೆ ಮತ್ತಷ್ಟು ಸೇವೆ ಮಾಡಲು ಪ್ರೇರಣೆಯಾಗಿದೆ.

3. ರಕ್ಷಾ ಬಂಧನ ಆಚರಣೆ

ಬೆಂಗಳೂರು, ಹೈದರಾಬಾದ್, ದೆಹಲಿ, ಮುಂಬೈ ಸೇರಿದಂತೆ ವಿವಿಧ ನಗರಗಳಲ್ಲಿ ಸ್ವಯಂಸೇವಕರು ಹಿರಿಯರಿಗೆ ರಾಖಿ ಕಟ್ಟಿ, ಪ್ರೀತಿ ಮತ್ತು ಆತ್ಮೀಯತೆಯಿಂದ ರಕ್ಷಾ ಬಂಧನವನ್ನು ಆಚರಿಸಿದರು.

<table>
<tr>
<td>

Goodera ಪ್ರಶಸ್ತಿ 2026 - ಗೌರವದ ಕ್ಷಣ</td>
<td>
ರಾಜೇಶ್ವರಿ ಫೌಂಡೇಶನ್: ಸಿಟಿ ಕೋಆರ್ಡಿನೇಟರ್ ಐಲಾ ಅನುರಾಧಾ ಅವರ ನೇತೃತ್ವದಲ್ಲಿ ರಕ್ಷಾ ಬಂಧನವನ್ನು ಪ್ರೀತಿ ಮತ್ತು ಆತ್ಮೀಯತೆಯಿಂದ ಆಚರಿಸಲಾಯಿತು.</td>
</tr>
<tr>
<td>
ಚೆನ್ನೈ: ಸ್ವಯಂಸೇವಕರಾದ G.S. ವಿದ್ಯಾ, ಅವರು ಹಿರಿಯರಿಗಾಗಿ ಸರಳ ಮನರಂಜನಾ ಆಟಗಳನ್ನು ಆಯೋಜಿಸಿದರ</td>
<td>
ಹೆಲ್ಪಿಂಗ್ಹಾಟ್ಸ್ಆದ್ಧಾಶ್ರಮ, ಕೊಯಮತ್ತೂರು: ಸ್ವಯಂಸೇವ ಸಂಧ್ಯಾ ಅವರು ಹಿರಿಯರೊಂದಿಗೆ ವಿವಿಧ ಆಟಗಳು ಮತ್ ಮನರಂಜನಾ ಚಟುವಟಿಕೆಗಳನ್ನು ನಡೆಸಿ ಸಂತಸದ ಸಮಯವನ ಹಂಚಿಕೊಂಡರು.</td>
</tr>
</table>

Year: 3rd Issue: 1st

ಅಕ್ಟೋಬರ್ – ಡಿಸೆಂಬರ್ 2026

MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.	**FOR WHATSAPP**
ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ	**9552510400/9552510411** **8055995966**

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ
1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

Website - www.mayacare.org	**Email : service@mayacare.org**

Merchant Name : MAYA CARE FOUNDATION
Mobile Number : 7721053535

Deduction under I-Tax Act is Available

NAME OF THE A/C - MAYA CARE FOUNDATION
NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

UPI ID: mayacarefoundation@icici

Book-Post

FROM:	**TO:**
MAYA CARE FOUNDATION 1214 Shukrawar Peth, Africa House, Subhash Nagar, Lane no.04,Pune-411002	**Shree / Shrimati** _____ _____ _____ _____